ಕರ್ನಾಟಕ ವಿಧಾನ ಸಭೆ

KARNATAKA LEGISLATIVE ASSEMBLY

ಶುಕ್ರವಾರ 1ನೇ ಆಗಸ್ಟ್ 1997 ರಂದು

ಸದನವು ವಿಧಾನ ಸೌಧದಲ್ಲಿರುವ ವಿಧಾನಸಭೆಯ ಸಭಾಂಗಣದಲ್ಲಿ

ಬೆಳಿಗ್ಗೆ : 10.00 ಗಂಟೆಗೆ ಸಮಾವೇಶಗೊಂಡಿತು.

ಅಧ್ಯಕ್ಷರು : **(ಶ್ರೀ ರಮೇಶ್ ಕುಮಾರ್)** ಅವರು

ಪೀಠವನ್ನು ಅಲಂಕರಿಸಿದ್ದರು.

ಪ್ರಶ್ನೋತ್ತರಗಳು

ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಬಾಯಿ ಮಾತಿನ ಮೂಲಕ ನೀಡಲಾದ ಉತ್ತರಗಳು.

ಮಾಗಡಿ ತಾಲ್ಲೂಕಿಗೆ ಸಾರಿಗೆ ಸೌಕರ್ಯ.

286 - ಶ್ರೀ ಹೆಚ್.ಸಿ. ಬಾಲಕೃಷ್ಣ (ಮಾಗಡಿ) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮಾಗಡಿ ತಾಲ್ಲೂಕಿನ ಹಲವಾರು ಗ್ರಾಮಾಂತರ ಕೇಂದ್ರಗಳಿಗೆ ಅಸಮರ್ಪಕ ಸಾರಿಗೆ ವ್ಯವಸ್ಥೆಯಿಂದ ತೀವ್ರ ತೊಂದರೆ ಆಗಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಆ) ಈ ಹಿಂದೆ ಹಲವಾರು ಭಾರಿ ಈ ವಿಷಯವನ್ನು ಸದನದಲ್ಲಿ ಪ್ರಸ್ತಾಪಿಸಿದ್ದರೂ ಕೂಡ ಸಾರಿಗೆ ವ್ಯವಸ್ಥೆಯನ್ನು ಉತ್ತಮ ಪಡಿಸದೇ ಇರುವುದಕ್ಕೆ ಕಾರಣವೇನು?

ಇ) ಈ ಬಗ್ಗೆ ಸರ್ಕಾರದ ಕ್ರಮವೇನು?

ಶ್ರೀ ಪಿ.ಜಿ.ಆರ್. ಸಿಂಧ್ಯಾ (ಸಾರಿಗೆ ಸಚಿವರು) :

ಅ) ಹೌದು

ಆ) ಮಾಗಡಿ ತಾಲ್ಲೂಕು ರಾಷ್ಟ್ರೀಕೃತ ವಲಯದಲ್ಲಿ ಇಲ್ಲದಿರುವುದರಿಂದ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ವತಿಯಿಂದ ಸಾರಿಗೆ ವ್ಯವಸ್ಥೆ ಉತ್ತಮ ಪಡಿಸುವ ಅನಿವಾರ್ಯತೆ ಸಂಸ್ಥೆಯ ಮೇಲಿಲ್ಲ. ಆದರೂ ಸಂಸ್ಥೆಯ ವತಿಯಿಂದ ಮಾಗಡಿ ತಾಲ್ಲೂಕಿನ 26 ಮಾರ್ಗಗಳಲ್ಲಿ ಸಂಚಾರ ವ್ಯವಸ್ಥೆ ಏರ್ಪಡಿಸಲಾಗಿದೆ.

ಇ) -ಡಿಟೋ-

ಶ್ರೀ ಹೆಚ್. ಸಿ. ಬಾಲಕೃಷ್ಣ : ಮಾನ್ಯ ಅಧ್ಯಕ್ಷರೇ, ನಾನು ಮಾಗಡಿ ತಾಲ್ಲೂಕಿನಲ್ಲಿ ಬಸ್ಸುಗಳ ತೊಂದರೆ ಇದೆಯೆಂದು ಹೇಳಿ ಇದು ಸರ್ಕಾರದ ಗಮನಕ್ಕೆ ಬಂದಿದೆಯೇ ಎಂದು ಕೇಳಿದ್ದಕ್ಕೆ 'ಹೌದು' ಎಂದು ಉತ್ತರವನ್ನು ಕೊಟ್ಟಿದ್ದಾರೆ. ಆದರೂ ಕೂಡ ಇದಕ್ಕೆ ಏನು ವ್ಯವಸ್ಥೆ ಮಾಡಿದ್ದೀರಿ ಎಂದರೆ ನಮ್ಮ ವ್ಯವಸ್ಥೆಗೆ ಬರುವುದಿಲ್ಲ? ಎಂದು ಉತ್ತರವನ್ನು ಕೂಡ ಕೊಟ್ಟಿದ್ದಾರೆ. ಈಗ ನನ್ನ ಕ್ಷೇತ್ರದಲ್ಲಿ ಬಹಳ ತೊಂದರೆ ಇದೆ. ನಾನು ಹಲವಾರು ಬಾರಿ ಸದನದಲ್ಲಿ ಕೂಡ ಪ್ರಸ್ತಾಪ ಮಾಡಿದ್ದೆ. ಖಾಸಗಿಯವರು ಬಸ್‌ಗಳನ್ನು ಸರಿಯಾಗಿ ಓಡಿಸುವುದಿಲ್ಲ ಎನ್ನುವುದರ ಬಗ್ಗೆ ನಾನು ಮಾತನಾಡಿದ್ದೆ. ಹಿಂದೆ ಒಂದು ಪ್ರಶ್ನೆಯಲ್ಲಿ ಪ್ರೈವೇಟ್ ಬಸ್ಸಿನವರಿಗೆ ಎಷ್ಟು ಪರ್ಮಿಟ್‌ಗಳನ್ನು ಕೊಟ್ಟಿದ್ದೀರಿ ಎಂದು ಕೇಳಿದ್ದಕ್ಕೆ 144 ಪರ್ಮಿಟ್‌ಗಳನ್ನು ಕೊಟ್ಟಿದ್ದೇವೆ ಎಂದು ಹೇಳಿದ್ದರು. ಎಷ್ಟು ಓಡುತ್ತಿವೆ ಎಂದು ಕೇಳಿದ್ದಕ್ಕೆ ಅವುಗಳಿಗೆ 68 ಬಸ್ಸುಗಳು ಓಡುತ್ತಿವೆ, 76 ನಿಂತಿವೆ ಎಂದು ಕೂಡ ಹೇಳಿದ್ದರು. ಆದರೆ ಇವತ್ತು 68ರಲ್ಲಿ 30 ಬಸ್ಸುಗಳು ಮಾತ್ರ ಓಡುತ್ತಿವೆ. ಜೊತೆಗೆ ನಮ್ಮದು ಈಕಡೆ ನ್ಯಾಷನಲೈಸ್ ಆಗಿಲ್ಲ. ಆ ಕಡೆಗೆ ಪ್ರೈವೇಟ್‌ನವರೂ ಸರಿಯಾಗಿ ಓಡಿಸುತ್ತಿಲ್ಲ. ದಯಮಾಡಿ ಮಾನ್ಯ ಮಂತ್ರಿಗಳು ಏನಾದರೂ ಒಂದು ವ್ಯವಸ್ಥೆಯನ್ನು ನಮಗೆ ಮಾಡಿಕೊಡಬೇಕು. ಏಕೆಂದರೆ ನಮಗೆ ಬಹಳ ತೊಂದರೆಯಾಗಿದೆ. ಇದಕ್ಕೆ ಒಂದು ಉತ್ತರವನ್ನು ಅವರು ಕೊಡಬೇಕು. ಇನ್ನೊಂದು ಉಪಪ್ರಶ್ನೆ ಏನೆಂದರೆ, ಪ್ರತಿ ಕ್ಷೇತ್ರಕ್ಕೆ ಡಬಲ್‌ಡೋರ್ ಬಸ್ಸುಗಳನ್ನು ಕೊಡುತ್ತೇವೆ ಎನ್ನತಕ್ಕಂಥ ಆಶ್ವಾಸನೆಯನ್ನು ಮಂತ್ರಿಗಳು ಈ ಸದನದಲ್ಲಿ ಕೊಟ್ಟಿದ್ದರು. ಅದು ಏಕೆ ನಮ್ಮ ಕ್ಷೇತ್ರಕ್ಕೆ ಇನ್ನೂ ಕೊಟ್ಟಿಲ್ಲ? ಅದನ್ನು ಯಾವಾಗ ಕೊಡುತ್ತಾರೆ? ಮತ್ತೊಂದು ಉಪಪ್ರಶ್ನೆ. ಕುಣಿಗಲ್ ಮಾರ್ಗವಾಗಿ ಮಂಗಳೂರಿಗೆ ಹೋಗತಕ್ಕಂಥ ಬಸ್ಸುಗಳನ್ನು, ಹಾಸನ-ಮಂಗಳೂರು ಕಡೆಗೆ ಹೋಗತಕ್ಕಂಥ ಬಸ್ಸುಗಳನ್ನು ನಮ್ಮ ಮಾಗಡಿ ಮೇಲೆ ಓಡಿಸಿದರೆ ಬಹುಶಃ ಇದರಿಂದ ಅನೇಕ ಜನರಿಗೆ ಅನುಕೂಲವಾಗುತ್ತದೆ. ಎಲ್ಲ ಬಸ್ಸುಗಳನ್ನು ಅಲ್ಲ, ಕೆಲವು ಬಸ್ಸುಗಳನ್ನಾದರೂ ಆ ಮಾರ್ಗವಾಗಿ ಓಡಿಸಬೇಕು. ಈಗಾಗಲೇ ಧರ್ಮಸ್ಥಳಕ್ಕೆ ಒಂದು ಗಾಡಿ ಹೋಗುತ್ತಿದೆ. ಆ ರೀತಿ ಕೆಲವು ಗಾಡಿಗಳನ್ನು ಮಾಗಡಿ ಮೇಲೆ ಓಡಿಸಿದರೆ ಬಹಳ ಅನುಕೂಲವಾಗುತ್ತದೆ. ಇದರ ಬಗ್ಗೆ ಮಾನ್ಯ ಮಂತ್ರಿಗಳು ಸ್ಪಷ್ಟೀಕರಣ ಕೊಡಬೇಕೆಂದು ಕೇಳುತ್ತೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಮಾನ್ಯ ಸದಸ್ಯರು ಕಳೆದ ಅಧಿವೇಶನದಲ್ಲಿ ಈ ವಿಷಯವನ್ನು ಪ್ರಸ್ತಾಪ ಮಾಡಿದ ಮೇಲೆ ನಾನು ಜಿಲ್ಲಾಧಿಕಾರಿಗಳ ಹಾಗೂ ಸಂಬಂಧಪಟ್ಟ ಇಲಾಖಾಧಿಕಾರಿಗಳ ಒಂದು ಸಭೆಯನ್ನು ಕರೆದು ಇದನ್ನು ಬಗೆಹರಿಸುವುದಕ್ಕೆ ಪ್ರಯತ್ನವನ್ನು ಮಾಡಿದ್ದೇನೆ. ಇದು ರಾಷ್ಟ್ರೀಕರಣ ಆಗದೇ ಹೋದರೂ ಸಹಿತ ಕೆಎಸ್‌ಆರ್‌ಟಿಸಿ ಮತ್ತು ಬಿಟಿಎಸ್ ನಿಂದ ಸುಮಾರು 51 ಸುತ್ತುವಳಿಗಳನ್ನು ಮಾಗಡಿ ತಾಲ್ಲೂಕಿನ ಭಾಗದಲ್ಲಿ ನಾವು ಓಡಾಡಿಸುತ್ತಾ ಇದ್ದೇವೆ. ವಿದ್ಯಾರ್ಥಿಗಳು, ಮುಖಂಡರುಗಳು, ತಾಲ್ಲೂಕು ಪಂಚಾಯಿತಿ ಮತ್ತು ಜಿಲ್ಲಾ ಪಂಚಾಯತಿ ಸದಸ್ಯರುಗಳು ಹಾಗೂ ಸಾರ್ವಜನಿಕರು ಎಲ್ಲರೂ ಸಹಿತ ಇದನ್ನು ನನ್ನ ಗಮನಕ್ಕೆ ತಂದಿದ್ದಾರೆ. ಆಗಸ್ಟ್ 16 ಅಥವಾ 17 ನೇ ತಾರೀಖಿನ ನಂತರ ಮಾನ್ಯ ಸದಸ್ಯರನ್ನು ಸಂಬಂಧಪಟ್ಟ ಅಧಿಕಾರಿಗಳನ್ನು ಮತ್ತು ಜಿಲ್ಲಾಧಿಕಾರಿಗಳನ್ನು ಹಾಗೂ ಸಾರಿಗೆ ಸಂಸ್ಥೆಯ ಅಧಿಕಾರಿಗಳನ್ನು ಅಧಿವೇಶನದ ಸಮಯದಲ್ಲಿಯೇ ಒಂದು ಸಭೆ ಕರೆದು ಖಾಸಗಿ ಕ್ಷೇತ್ರದಲ್ಲಿ ಅಥವಾ ಸಾರಿಗೆ ಸಂಸ್ಥೆಯ ವತಿಯಿಂದ ಎಷ್ಟು ಸಾಧ್ಯವೋ ಅಷ್ಟು ಬಸ್ಸುಗಳನ್ನು

ಓಡಿಸುವುದಕ್ಕೆ ಪ್ರಯತ್ನ ಮಾಡುತ್ತೇನೆ. ಈ ವಿಚಾರವನ್ನು ಮಾನ್ಯ ಸದಸ್ಯರು ಮತ್ತೊಮ್ಮೆ ನನಗೆ ಜ್ಞಾಪಕ ಮಾಡಬೇಕು. ಎರಡನೆಯದಾಗಿ, ಡಬಲ್ ಡೋರ್ ಬಸ್ಸುಗಳನ್ನು ನಾವು ರಾಷ್ಟ್ರೀಕರಣ ಆಗಿರತಕ್ಕಂಥ ಪ್ರದೇಶಗಳಿಗೆ ಮಾತ್ರ ಕೊಡುತ್ತೇವೆಯೇ ಹೊರತು ಇಂಥ ಪ್ರದೇಶಗಳಿಗೆ ಇದುವರೆವಿಗೂ ಕೊಟ್ಟಿಲ್ಲ. ಕೊಡತಕ್ಕಂಥ ಸಾಧ್ಯತೆ ಇದ್ದರೆ ಅದನ್ನೂ ಸಹ ನಾನು ಆ ಸಭೆಯಲ್ಲಿ ಪರಿಶೀಲನೆ ಮಾಡುತ್ತೇನೆ. ಕುಣಿಗಲ್ ಮೂಲಕ ಹೋಗತಕ್ಕಂಥ ಕೆಲವು ಬಸ್ಸುಗಳನ್ನು ನೆಲಮಂಗಲ ಕುಣಿಗಲ್ ಆದ ನಂತರ ಮಾಗಡಿ ಮೂಲಕ ಓಡಿಸಬೇಕೆಂದು ಹೇಳಿದ್ದಾರೆ. ಇದಲ್ಲದೇ ಬಹಳ ಜನ ಈ ವಿಚಾರವಾಗಿ ಸಲಹೆ ಕೂಡ ಕೊಟ್ಟಿದ್ದಾರೆ. ವಿದ್ಯಾರ್ಥಿಗಳು ನನ್ನ ಹತ್ತಿರ ಬಂದು ಈ ಸಲಹೆಯನ್ನು ಕೊಟ್ಟಿದ್ದಾರೆ, ಇದನ್ನೂ ಸಹಿತ ಆ ದಿವಸದ ಸಭೆಯಲ್ಲಿ ಪರಿಶೀಲನೆ ಮಾಡುತ್ತೇನೆ.

ಶ್ರೀ ಹೆಚ್.ಸಿ. ಬಾಲಕೃಷ್ಣ : ಕೆಲವು ಬಿಟಿಎಸ್ ಬಸ್ಸುಗಳನ್ನು ಈಗಾಗಲೇ ಓಡಿಸುತ್ತಿದ್ದಾರೆ, ಆದರೆ ಈ ಆಷಾಢದಲ್ಲಿ ಒಂದು ತಿಂಗಳು ಬಸ್ಸುಗಳನ್ನು ಓಡಿಸಿ ಅದರ ಆದಾಯವನ್ನು ಸರ್ಕಾರಕ್ಕೆ ಕೊಡುತ್ತಾರೆ. ಆಷಾಢದಲ್ಲಿ ನೀವು ಬಸ್ಸುಗಳನ್ನು ಓಡಿಸಿರುವುದರಿಂದ ಅಷ್ಟಾಗಿ ಆದಾಯ ಬರುವುದಿಲ್ಲ ಆ ವರದಿಯನ್ನೇ ಆಧಾರವಾಗಿಟ್ಟುಕೊಂಡು ಬಸ್ಸುಗಳನ್ನು ಮುಂದೆ ಹಾಕುವಂಥ ವ್ಯವಸ್ಥೆ ಆಗುವುದು ಬೇಡ ಎಂದು ನಾನು ಮಂತ್ರಿಗಳಲ್ಲಿ ಮನವಿ ಮಾಡಿಕೊಳ್ಳುತ್ತೇನೆ, ಜೊತೆಗೆ ಡಬಲ್ ಡೋರ್ ಬಸ್ಸುಗಳ ವಿಚಾರದಲ್ಲಿ ನನಗೆ ಮಂತ್ರಿಗಳು ಈ ಸದನದಲ್ಲಿ ಕೊಡುತ್ತೇವೆಂದು ಆಶ್ವಾಸನೆ ಕೊಟ್ಟಿದ್ದರು, ಅದನ್ನು ತಾವು ದಯಮಾಡಿ ಕನ್ಸಿಡರ್ ಮಾಡಬೇಕೆಂದು ನಾನು ತಮ್ಮಮುಖಾಂತರ ಮನವಿ ಮಾಡಿಕೊಳ್ಳುತ್ತೇನೆ.

ಅಧ್ಯಕ್ಷರು : ಉತ್ತರ ನಾನೇ ಹೇಳಿಬಿಡುತ್ತೇನೆ, ಸಮಯ ಮುಗಿದು ಹೋಗುತ್ತದೆ. ಇನ್ನು ಏನು ಆಷಾಢ ನಾಳೆಗೆ ಮುಗಿದು ಹೋಗುತ್ತದೆ, ಡಬಲ್ ಡೋರ್ ಬಸ್ಸುಗಳನ್ನು ಕೊಡಬೇಕೆಂದು ಹೇಳಿದ್ದೀರಿ, ಅದರ ಬಗ್ಗೆ ಆಲೋಚನೆ ಮಾಡುತ್ತೇನೆಂದು ಹೇಳಿದ್ದಾರೆ.

ಶ್ರೀ ಹೆಚ್.ಸಿ. ಬಾಲಕೃಷ್ಣ : ಅಧ್ಯಕ್ಷರೆ, ಅದೇ ವರದಿಯನ್ನು ಆಧಾರವಾಗಿಟ್ಟು ಕೊಂಡು ಅಧಿಕಾರಿಗಳು ಬಸ್ಸುಗಳನ್ನು ಮುಂದೆ ಹಾಕುವಂಥ ವ್ಯವಸ್ಥೆ ಮಾಡಿದರೆ ಹೇಗೆ?

ಅಧ್ಯಕ್ಷರು : ನೋಡಿ ಕೆಎಸ್ಆರ್‌ಟಿಸಿಯವರಿಗೆ ವರ್ಷ ಪೂರ್ತಿ ಶ್ರಾವಣ ಎಂದೇ ಪರಿಗಣಿಸಬೇಕು ಎಂದು ನಾವು ಆದೇಶ ಕೊಟ್ಟಿದ್ದೇವೆ.

ಶಿರಾ ತಾಲ್ಲೂಕಿನಲ್ಲಿ ತೆಂಗು ಅಭಿವೃದ್ಧಿ ಮಂಡಳಿಯಲ್ಲಿ ಸಹಾಯ ಧನದ ದುರುಪಯೋಗ.

287 - ಶ್ರೀ ಟಿ.ಬಿ. ಜಯಚಂದ್ರ (ಕಳ್ಳಂಬೆಳ್ಳ) : ಮಾನ್ಯ ತೋಟಗಾರಿಕೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಳೆದ 3 ವರ್ಷದಿಂದ ಶಿರಾ ತಾಲ್ಲೂಕಿನಲ್ಲಿ ತೋಟಗಾರಿಕಾ ಅಧಿಕಾರಿಗಳು ತೆಂಗು ಅಭಿವೃದ್ಧಿ ಮಂಡಳಿಗೆ ಸಹಾಯ ಧನಕ್ಕಾಗಿ ಶಿಫಾರಸ್ಸು ಮಾಡಿ ಕಳುಹಿಸಿರುವ ಫಲಾನುಭವಿಗಳೆಷ್ಟು? (ಫಲಾನುಭವಿಗಳ ವಿವರ ನೀಡುವುದು)